ಕೊಡುವುದಿಲ್ಲವೋ ನೊಡುತ್ತೇನೆ" ಎಂದೆ.

"ಪಂಡಿತರೇ, ತಮ್ಮ ಭಾವನೆಗಳನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ, ನಮ್ಮ ಕೈಗಳು ನಿಯಮಗಳಿಂದ ಬಂಧಿಸಲ್ಪಟ್ಟಿವೆ. ಆ ನಿಯಮಗಳ ಪ್ರಕಾರ ಕೇವಲ ಅವನ ಸಂಬಂಧಿಕರಿಗಷ್ಟೇ ಶವ ಕೊಡಲು ಸಾಧ್ಯವಿದೆ. ಸಂಬಂಧಿಕರಿಗಾಗಿ ಶವವನ್ನು ಮೂರು ದಿನ ಇಟ್ಟುಕೊಳ್ಳುತ್ತೇವೆ. ಮೂರು ದಿನಗಳ ನಂತರ ಅದನ್ನು ಕೆ.ಇ.ಎಂ. ಆಸ್ಪತ್ರೆಗೆ ಕಳಿಸುತ್ತೇವೆ. ಅಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಅವನ ದೇಹವನ್ನು ತಮ್ಮ ಅಭ್ಯಾಸಕ್ಕೆ ಉಪಯೋಗಿಸಿಕೊಳ್ಳುತ್ತಾರೆ" ಎಂದರು ಇನ್‌ಸ್ಪೆಕ್ಟರ್.

ಇನ್ನು ಅಲ್ಲಿ ಕುಳಿತುಕೊಳ್ಳುವುದರಲ್ಲಿ ಅರ್ಥವಿರಲಿಲ್ಲ. ನಾವು ಹೊರಡುವವರಿದ್ದೆವು. ಅಷ್ಟರಲ್ಲಿ ಇನ್‌ಸ್ಪೆಕ್ಟರರು, "ಹಾಂ. ಸಾಥಿಯಾನ ಕೆಲ ವಸ್ತುಗಳು ನಮ್ಮಲ್ಲಿವೆ. ಬೇಕಾದರೆ, ತಾವು ಅವುಗಳನ್ನು ಒಯ್ಯಬಹುದು" ಎಂದರು.

ಅವರು ಪೇದೆಯೊಬ್ಬನಿಂದ ಸಾಥಿಯಾನ ಟ್ರಂಕನ್ನು ತರಿಸಿ ಅದರೊಳಗಿನ ವಸ್ತುಗಳನ್ನು ನಮಗೆ ತೋರಿಸಿದರು.

ಟ್ರಂಕಿನಲ್ಲಿ ಸುಷ್ಮಾ ಕೊಟ್ಟ ಚಾದರ, ನನ್ನ ಶರ್ಟ್, ಪ್ಯಾಂಟ್ ಮತ್ತು ಎರಡು ಹಾಫ್‌ಪ್ಯಾಂಟ್ ಮತ್ತು ಎರಡು ಬನಿಯನ್ನುಗಳಿದ್ದವು. ಒಂದು ನ್ಯಾಪ್‌ಕಿನ್ ಇತ್ತು. 'ಹನುಮಾನಚಾಲಿಸಾ' ಎಂಬ ಪುಟ್ಟ ಪುಸ್ತಕವಿತ್ತು. ಒಂದು ಪ್ಲಾಸ್ಟಿಕ್ ಡಬ್ಬಿಯಲ್ಲಿ ಕೆಲ ನೋಟುಗಳಿದ್ದವು. ಕೆಲ ಚಿಲ್ಲರೆ ನಾಣ್ಯಗಳೂ ಇದ್ದವು. ಅವುಗಳನ್ನು ಎಣಿಸಿ ನೋಡಿದೆವು. ಒಟ್ಟು ನಲವತ್ತು ರೂಪಾಯಿ ಹನ್ನೆರೆಡಾಣೆಗಳಿದ್ದವು.

"ತಾವು ಇಲ್ಲಿ ನಿಮ್ಮ ಸಹಿ ಮಾಡಿ ಇವುಗಳನ್ನು ತೆಗೆದುಕೊಂಡು ಹೋಗಬಹುದು" ಎಂದರು.

ನಾನು ಮತ್ತು ಮಮತಾಳ ತಂದೆ ಸಹಿ ಮಾಡಿ ಟ್ರಂಕನ್ನು ತೆಗೆದುಕೊಂಡು ಆಟೊದಲ್ಲಿ ಮನೆಯತ್ತ ಹೊರಟಿದ್ದೆವು. ಹೈವೇ ಬದಿಯಲ್ಲಿಯೇ ಕೃಷ್ಣಮಂದಿರವಿತ್ತು. ನಾವು ಅಲ್ಲಿಳಿದೆವು. ಪ್ರತಿದಿನ ಸಾಥಿಯಾ ಕುಳಿತುಕೊಳ್ಳುತ್ತಿದ್ದ ಸ್ಥಳದಲ್ಲಿ ಒಬ್ಬ ಕುಂಟ ಕುಳಿತಿರುವುದು ಕಂಡು ಬಂದಿತು.

"ಈ ಸ್ಥಳದಲ್ಲಿ ಮೊದಲೊಬ್ಬ ಕುಳಿತುಕೊಳ್ಳುತ್ತಿದ್ದ. ನೀನು ಅವನನ್ನು ಬಲ್ಲೆಯಾ?" ಎಂದು ಆತನನ್ನು ಕೇಳಿದೆ.

"ಹೌದು ಸರ್. ಇಲ್ಲಿ ಸಾಥಿಯಾ ಕುಳಿತುಕೊಳ್ಳುತ್ತಿದ್ದ. ಪಾಪ, ಈಗ ಅವನು ಸತ್ತಿದ್ದಾನೆ. ಆದ್ದರಿಂದ ನಾನು ಇಲ್ಲಿ ಕುಳಿತುಕೊಳ್ಳುತ್ತಿದ್ದೇನೆ" ಆತ ಉತ್ತರಿಸಿದ.

"ಅವನ ಕೆಲ ವಸ್ತುಗಳು ನಮ್ಮಲ್ಲಿವೆ. ನಿನಗೆ ಬೇಕೇನು?"

ಅವನು ನಮ್ಮತ್ತ ನೋಡುತ್ತಲಿದ್ದ. ನಾವು ಸಾಥಿಯಾನ ಟ್ರಂಕನ್ನು ಅವನ ಮುಂದೆ ಇಟ್ಟೆವು. ಆತ ಟ್ರಂಕಿನ ಬಾಯಿ ತೆರೆದು ಅದರೊಳಗಿನ ವಸ್ತುಗಳನ್ನೆಲ್ಲ ನೋಡಿದ. ಅವನ ಮುಖ ಸಂತೋಷದಿಂದ ಅರಳಿತು.

ನೆಲಕ್ಕೆ ಹಣೆಯನ್ನಿಟ್ಟು ನಮಸ್ಕರಿಸುತ್ತ, "ಸಾಹೇಬರೆ, ದೊಡ್ಡ ಉಪಕಾರ ಮಾಡಿದಿರಿ" ಎಂದ.

"ಇದರಲ್ಲಿ ನಮ್ಮದೇನೂ ಇಲ್ಲ. ಎಲ್ಲವೂ ಸಾಥಿಯಾನದೇ" ಎಂದೆವು.

"ಸಾಥಿಯಾ ಬಹಳ ದೊಡ್ಡ ಮನುಷ್ಯ. ದೇವರು ಅವನ ಆತ್ಮಕ್ಕೆ ಶಾಂತಿಯನ್ನೀಯಲಿ" ಎಂದು ಆತ ಮಂದಿರದಲ್ಲಿಯ ದೇವರ ಮುಖ ನೋಡುತ್ತ ಅಂದ.

ಮನೆಗೆ ಬಂದ ಮೇಲೆ ಸುಷ್ಮಾಳಿಗೆ ಎಲ್ಲವನ್ನು ಸವಿಸ್ತಾರವಾಗಿ ವಿವರಿಸಿದೆ. ಸಾಥಿಯಾ